ಕವಿತೆ

# ಕೆಲಿಡೋಸ್ಕೋಪ್



## ದಾದಾಪೀರ್ ಜೈಮನ್

ಕಲೆ: ರೂಪಶ್ರೀ ಕಲ್ಲಿಗನೂರು

ಇರುವುದಿಷ್ಟೇ ನೆಲ
ಸುತ್ತೆಲ್ಲಾ ಗೋಡೆಗಳು
ಕನ್ನಡಿ ಗಾಜಿನ ಗೋಡೆಗಳು

ನಾನು
ತಳಕ್ಕೆ ಬಿದ್ದ
ಗಾಜಿನ ಚೂರು
ಒಡೆದ ಗಾಜಿನ ಬಳೆಯ ಚೂರು
ಮೊದಲು ಒಡೆದಿರಲಿಲ್ಲವೆ?

ಕಾಲ ಸರಿದಂತೆಲ್ಲಾ
ಬೆಳೆಯುತ್ತವೆ
ಗೋಡೆಗಳು
ಉದ್ದಗಳಲ್ಲಿ ಅಗಲಗಳಲ್ಲಿ
ಅಂಕೆಗಳಲ್ಲಿ
ಮೊದಲು ಗೋಡೆಗಳೆ ಇರಲಿಲ್ಲವೆ?

ನಾನು
ಬೆಳೆಯುವುದಿಲ್ಲ
ಜಾಗ ಬದಲಿಸುತ್ತೇನೆ
ಚೂರು ಚೂರಾಗುತ್ತೇನೆ
ಮತ್ತಷ್ಟು
ಕುಲುಕಿದಷ್ಟು
ಹಾಗಾದರೆ ಇಲ್ಲಿರುವುದು ನಾವಷ್ಟೆ ಅಲ್ಲವೇ?

ಮೇಲಿಂದ ಯಾರೊ
ಇಣುಕುತ್ತಿದ್ದಾರೆ
ಪಾತಾಳಗರಡಿಯ ಬಿಟ್ಟು
ಮೇಲೆತ್ತುವ ಆಟವಾಡುತ್ತಿದ್ದಾರೆ
ನಮ್ಮನ್ನು ಮೀರಿದ್ದೊಂದು ಸದಾ ಇದೆಯಂತೆ
ಆಕಾಶ ನೋಡಿ ಕೈಯನೆತ್ತಿ
ಕರೆವ ಹೆಸರಿಗೆ ಕರುಳನರಸಿ...

ಈ ಹೆಸರೆಂಬುದೊಂದು ಮೊದಲೇ ಇತ್ತೆ?

ನಾವು ಕೊಡುವ ಹೆಸರೆಲ್ಲ
ನಮ್ಮೊಳಗಿನ ಭಯಕ್ಕೆ ತಕ್ಕ ಹಾಗೆ
ಭ್ರಮೆಯ ಸೊಲ್ಲಿನಂತೆ!
ಮುಂದೆ ಯಾರೋ ಬದಲಿಸಬಹುದು
ಬದಲಿಸುವುದು ನಮ್ಮೆಲ್ಲರಿಗಂಟಿದ ಆದಿಮ ಖಯಾಲಿ

ಗೋಡೆಗಳು ಮತ್ತು ನಾನು
ಮೊದಲೆ ನಿರ್ಧರಿಸಿಬಿಟ್ಟದ್ದೇವೆ
ನಮ್ಮ ನಮ್ಮ ಯೋಗ್ಯತೆಗಳನ್ನು
ಆದರೂ
ನೋಡುವುದನ್ನು ಬಿಟ್ಟಿಲ್ಲ
ಸಂತೈಸುವುದನ್ನು ಬಿಟ್ಟಿಲ್ಲ
ಪೂರ್ವಗ್ರಹಗಳನ್ನು...
ಒಳಗಿನ ಹುಳುಕುಗಳನ್ನು
ಛಿದ್ರ ಆತ್ಮದ ಚೂರುಗಳನ್ನು
ನಮಗೀಗ
ಒಬ್ಬರನ್ನೊಬ್ಬರು ಬಿಟ್ಟು ಇರಲಾಗುವುದಿಲ್ಲ
ಇಲ್ಲಿ ಎಲ್ಲ ಮೊದಲೆ ನಿರ್ಧರಿತವಾಗಿದೆಯಂತೆ
ಯುದ್ಧ
ಒಳಗೆ ಹೊರಗೆ
ಇಣುಕುವವರ ಪಾಳಿಗಳು
ಇಲ್ಲಿ ಬದಲಿಯಾಗುವುದು
ಬದಲಿಯಾಗುತ್ತಲೇ ಇರುವುದು
ನಮೂನೆಗಳು ಮಾತ್ರ!

